ಮುದ್ದಣ್ಣನ ಕೃತಿಗಳ ಪ್ರಯೋಗದ ಕುರಿತೇ ಮಹತ್ತ್ವದ ಕೃತಿಯನ್ನು ರಚಿಸಿದ್ದಾರೆ.

'ಪ್ರಜಾವಾಣಿ'ಯಲ್ಲಿ ಅಂಕಣ ರೂಪದಲ್ಲಿ ಸುದೀರ್ಘವಾಗಿ ಪ್ರಕಟವಾಗಿ ನಂತರ ಕೃತಿಯಾಕಾರ ತಳೆದ 'ಇಗೋ ಕನ್ನಡ' ಜಿ.ವಿಯವರ ಇನ್ನೊಂದು ಮಹತ್ತ್ವದ ಸಾಧನೆ. ಸಾಮಾಜಿಕ ನಿಘಂಟು ಎಂದು ಕರೆಸಿಕೊಂಡಿರುವ ಇದರಲ್ಲಿ ಆಸಕ್ತ ವಿದ್ವಾಂಸರಿಗೆ, ಕನ್ನಡ ಅಭ್ಯಾಸಿಗಳಿಗೆ, ಸಾಮಾನ್ಯ ಓದುಗರಿಗೆ ಉತ್ತರಗಳು ದೊರಕುತ್ತಿದ್ದವು. ಜನಪ್ರಿಯ ಪತ್ರಿಕೆಯ ವ್ಯಾಪ್ತಿಯನ್ನು ಅನುಸರಿಸಿ ಅವರು ಅಂಕಣವನ್ನು ನಿರ್ವಹಿಸಿದ ರೀತಿ ಮಾದರಿ ಎನ್ನುವಂತಿದೆ. ಮೂರು ಸಂಪುಟಗಳಲ್ಲಿ ಈ ಮಾಲಿಕೆ ಪ್ರಕಟವಾಗಿದ್ದು, ಸಮಗ್ರ ಸಂಪುಟವೂ ಬಂದಿದೆ. 'ಕನ್ನಡ ಕ್ಲಿಷ್ಟ ಪದಕೋಶ' ಅವರು ರೂಪಿಸಿದ ಇನ್ನೊಂದು ಮಹತ್ತ್ವದ ನಿಘಂಟು.

ಜಿ.ವಿಯವರು ನಿಘಂಟು ಕ್ಷೇತ್ರದಲ್ಲಿ ಪರಿಣತರಾದರೂ ಅದಕ್ಕೇ ಸೀಮಿತರಾದವರಲ್ಲ. 1942ರಲ್ಲಿ 'ನಯಸೇನ' ಪುಸ್ತಕದೊಂದಿಗೆ ಅವರ ಬರವಣಿಗೆಯ ಯಾನ ಆರಂಭವಾಯಿತು. 'ಅನುಕಲ್ಪನೆ', 'ಪರಾಮರ್ಶನ', 'ಸೀಳು ನೋಟ' ಅವರ ವಿಮರ್ಶಾಕೃತಿಗಳಾದರೆ ಮೂರು ಸಂಪುಟಗಳಲ್ಲಿ 'ಭಾಷಾಂತರ ಪಾಠಗಳು' ಪ್ರಕಟವಾಗಿದೆ. 'ಕನ್ನಡ ಶಾಸನ ಪರಿಚಯ', 'ಕನ್ನಡ ಸಾಹಿತ್ಯ ನಡೆದು ಬಂದ ದಾರಿ', 'ಸಾಹಿತ್ಯ ಮತ್ತು ಶಿಕ್ಷಣ', 'ಕರ್ನಾಟಕ ವೈಭವ', 'ಇಣುಕು ನೋಟ' ಅವರ ಇತರ ಪ್ರಮುಖ ಕೃತಿಗಳು. ಪ್ರೊ. ಟಿ.ಎಸ್. ವೆಂಕಣ್ಣಯ್ಯ, ಡಿ.ವಿ. ಗುಂಡಪ್ಪ ಅವರ ವ್ಯಕ್ತಿಚಿತ್ರಗಳನ್ನು ಅವರು ರಚಿಸಿದ್ದಾರೆ. 'ಕನ್ನಡದ ನಾಯಕ ಮಣಿಗಳು' ಇವರ ಇನ್ನೊಂದು ಬಹಳ ಮುಖ್ಯವಾದ ವ್ಯಕ್ತಿಚಿತ್ರಣದ ಕೃತಿ.

ಗ್ರಂಥ ಸಂಪಾದನೆಯಲ್ಲಿ ಜಿ.ವಿಯವರದು ಮಹತ್ತ್ವದ ಸಾಧನೆ. 'ನಳಚಂಪು', 'ಅಕ್ರೂರ ಚರಿತೆ', 'ನಾಗರಸನ ಕನ್ನಡ ಭಗವದ್ಗೀತೆ' ಮೊದಲಾದ ಕೃತಿಗಳನ್ನು ಅವರು ಸಂಪಾದಿಸಿ ಕೊಟ್ಟಿದ್ದಾರೆ. ತಮಿಳು, ತೆಲುಗು, ಮಲಯಾಳಂ ಕತೆಗಳ ಸಂಪುಟಗಳನ್ನು ಸಂಪಾದಿಸಿದ್ದಾರೆ. ಜಿ.ವಿ ಉತ್ತಮ ಅನುವಾದಕರು ಕೂಡ. 'ಲಿಂಡನ್ ಜಾನ್‌ಸನ್ ಕತೆ', 'ಸಂಯುಕ್ತ ಸಂಸ್ಥಾನಗಳನ್ನು ಪರಿಚಯ ಮಾಡಿಕೊಳ್ಳಿ', 'ಶಂಕರಾಚಾರ್ಯ', 'ಕಬೀರ', 'ಸರಳದಾಸ', 'ನಮ್ಮ ಭಾರತ' ಅವರ ಪ್ರಮುಖ ಅನುವಾದಗಳು. ಜಿಡ್ಡು ಕೃಷ್ಣಮೂರ್ತಿಯವರ 'Beyond the known' ಕೃತಿಯನ್ನು 'ತಿಳಿದುದೆಲ್ಲವ ಬಿಟ್ಟು' ಎಂದು ಪರಿಣಾಮಕಾರಿಯಾಗಿ ಅವರು ಅನುವಾದಿಸಿದ್ದಾರೆ. ಮಕ್ಕಳಿಗಾಗಿ 'ರಾಬಿನ್ ಸನ್ ಕ್ರೂಸೋ', 'ಕವಿ ಜನ್ನ', 'ಚಾವುಂಡ ರಾಯ', 'ಚಿನ್ನರ ಚಿತ್ರ ರಾಮಾಯಣ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇಲ್ಲಿ ಉಲ್ಲೇಖಿಸಿರುವುದು ಅವರ ಕೆಲವು ಕೃತಿಗಳನ್ನು ಮಾತ್ರ. ಜಿ.ವಿಯವರ ಒಟ್ಟು ಕೃತಿಗಳು 78. ಇದರ ಜೊತೆಗೆ ಅವರು ಹೊಯ್ಸಳ ಮಾಲಿಕೆಯ 105 ಪುಸ್ತಕಗಳಿಗೆ ಸಂಪಾದಕರು.

## ಮನೆಗೆ ಬಂದ ಮಹಾ'ಲಕ್ಷ್ಮಿ'

ಜಿ. ವೆಂಕಟಸುಬ್ಬಯ್ಯನವರ ಜೀವನದಲ್ಲಿ ಅವರ ಮಡದಿ ಲಕ್ಷ್ಮಿಯವರ ಕೊಡುಗೆ ಸಾಕಷ್ಟಿದೆ. 1937ರ ಏಪ್ರಿಲ್ 30ರಂದು ಅವರ ವಿವಾಹವಾಯಿತು. ಆಗ ಅವರಿಗೆ 24 ವರ್ಷ, ಲಕ್ಷ್ಮಿಯವರಿಗೆ 13 ವರ್ಷ. ಮದುವೆಯಾಗಿ ಬಂದಾಗಲೇ ದೊಡ್ಡ ಸಂಸಾರ. ಎಲ್ಲರ ಜೊತೆಗೂ ಹೊಂದಿಕೊಂಡು ಸಂಸಾರ ಆರಂಭಿಸಿದರು. ಜಿ.ವಿಯವರೇ ಹಿರಿಯ ಮಗ; ಅವರ ತಂದೆಯವರಿಗೆ ಏಳು ಜನ ಗಂಡುಮಕ್ಕಳು, ಇಬ್ಬರು ಹೆಣ್ಣುಮಕ್ಕಳು, ಇದರ ಜೊತೆಗೆ ಚಿಕ್ಕಪ್ಪಂದಿರು, ದೊಡ್ಡಪ್ಪಂದಿರು ಇರುವಂತಹ ಅವಿಭಕ್ತ ಕುಟುಂಬ ಅವರದು. ಚಿಕ್ಕ ವಯಸ್ಸಿನಲ್ಲಿಯೇ ಈ ದೊಡ್ಡ ಕುಟುಂಬದ ಹೊಣೆ ಹೊತ್ತು ಲಕ್ಷ್ಮಿ ದಕ್ಷವಾಗಿ ಸಂಸಾರವನ್ನು ಸಾಗಿಸಿದರು. 1943ರಲ್ಲಿ ಸಂಸಾರ ಬೆಂಗಳೂರಿಗೆ ಬಂದಿತು. ಚಿಕ್ಕ ಕುಟುಂಬದ ಅನುಭವ ಸಿಕ್ಕರೂ ಅದು ಎರಡನೇ ಮಹಾಯುದ್ಧದ ಕಾಲ. ಕೆಲಸದ್ದೇ